**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**
**ದಿಃ 12.03.2025**

**ಪಾಟೀ ಸವಾಲುಃ ಶ್ರೀ ಸಿ ಪಿ ಎಂ ವಕೀಲರಿಂದ**

ನಾನು **3** ನೆ ತರಗತಿಯವರೆ ವಿದ್ಯಾಭಾಸ ಮಾಡಿದ್ದೇನೆ . ನನಗೆ ಕನ್ನಡ ಓದಲು ಸ್ವಲ್ಪ ಬರುತ್ತದೆ ಬರೆಯಲು ಬರುವುದಿಲ್ಲ. ನಾನು ಕನ್ನಡ ಭಾಷಯಲ್ಲಿ ಸಹಿ ಮಾಡುತ್ತ್ತೇನೆ . ನಾನು ಮೂಲತಃ ಮೈಸೂರು ಜಿಲ್ಲೆ ಕೆ ಆರ್ ನಗರ ತಾಲೂಕಿನ ಲಕ್ಕಿಕುಪ್ಪೆ ಗ್ರಾಮದವನು . ನನ್ನ ತಂದೆಯ ಹೆಸರು ಹೊನ್ನೆಗೌಡ . ನನ್ನ ತಂದೆಗೆ ಒಟ್ಟು **8** ಜನ ಮಕ್ಕಳಿದ್ದು **6** ಜನ ಗಂಡು ಮಕ್ಕಳು , **2** ಹೆಣ್ಣು ಮಕ್ಕಳು . ನನ್ನ ತಂದೆ ಜೀವಾತಾಧಿಯಲ್ಲಿ ಎಷ್ಟು ಆಸ್ತಿ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ.

ನನಗೆ ಸುಮಾರು **18** ವಯಸ್ಸಾಗಿದ್ದಾಗ ನಾವು ಲಕ್ಕಿಕುಪ್ಪೆ ಗ್ರಾಮದಿಂದ ಕೂಡುಮಂಗಳೂರಿಗೆ ಬಂದು ನೆಲಸಿದ್ದೇವೆ . ನನ್ನ ಮದುವೆಯನ್ನು ನನ್ನ ತಂದೆ ನೋಡಿ ಮಾಡಿರುತ್ತಾರೆ . ನನ್ನ ಮೊದಲನೆ ಅಕ್ಕನನ್ನು ಲಕ್ಕಿಕುಪ್ಪೆದ ನನ್ನ ತಾಯಿಯ ತಮ್ಮನಿಗೆ ಕೊಟ್ಟು ವಿವಾಹ ಮಾಡಿದ್ದು **2** ನೇ ಅಕ್ಕನನ್ನು ಕೆ ಆರ್ ನಗರ ತಾಲೂಕಿನ ಹೊನ್ನೆಹಳ್ಳಿ ಗ್ರಾಮಕ್ಕೆ ಕೊಟ್ಟು ವಿವಾಹ ಮಾಡಲಾಗಿದೆ . ನನ್ನ ಸಹೋದರರ ಪೈಕಿ ಮೊದಲನೆ ಯವರ ಹೆಸರು ಕಾಳೇಗೌಡ , **2** ನೇ ರವರು ಸಿದ್ದಪ್ಪ , **3** ನೇ ರವರು ಬೈರೇಗೌಡ , **4** ನೇ ರವರು ಪುಟ್ಟೆಗೌಡ ಅಂದರೆ ನಾನು **5** ನೇ ರವರು ತಮ್ಮೆಗೌಡ , **6** ನೇ ರವರು ಕೃಷ್ಣೆಗೌಡ ಆಗಿರುತ್ತಾರೆ . ನನ್ನ ತಹೊುದರರ ಪ್ರಕಿ ವೊುದಲನೆ ಸಹೋದರ ಹಾಗೂ ಕೊನೆಯ ಪೈಕಿ ಮೃತಪಟ್ಟಿರುತ್ತಾರೆ . ನನ್ನ ಸಹೋದರರ ಪೈಕಿ ಕೃಷ್ಣೇಗೌಡ ಹಾಗು

ಬೈರೇಗೌಡ ರವರು ಲಕ್ಕಿಕುಪ್ಪೆ ಗ್ರಾಮದಲ್ಲಿ ವಾಸವಿದ್ದು , ಸಿದ್ದಪ್ಪ ಕೂಡಿಗೆಯಲ್ಲಿ ವಾಸವಿದ್ದಾರೆ . ನನ್ನ ತಂದೆ ಜೀವಂತ ಇರುವಾಗ ವ್ಯವಸಾಯ ಮಾಡುತ್ತಿದ್ದರು. ನಮ್ಮನೆಲ್ಲರನ್ನೂ ವ್ಯವಸಾಯ ಮಾಡಿಕೊಂಡು ಸಾಕಿರುತ್ತಾರೆ. ಅವರು ವ್ಯವಸಾಯವನ್ನು ಹೊರತು ಪಡಿಸಿ ಅವರು ಬೇರೆ ಯಾವುದೆ ಉದ್ಯೋಗ ಮಾಡುತ್ತಿರಲಿಲ್ಲ.ನನ್ನ ತಂದೆಗೆ ಎಷ್ಟು ಜಮೀನು ಇದೆ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ.

ನನ್ನ ತಂದೆ ಜೀವಂತ ಇರುವಾಗಲೆ ವಿಭಾಗ ಮಾಡಿ ನನಗೆ **57** ಗುಂಟೆ ಜಾಗ ಹಾಗೂ ನನ್ನ ಅಜ್ಜಿಯ ಆಸ್ತಿಯನ್ನು **16** ಗುಂಟೆ ಜಾಗವನ್ನು ನನ್ನ ತಂದೆ ನೀಡಿರುತ್ತಾರೆ . ಆದ್ದರಿಂದ ವಿಭಾಗ ಬೇಕೆಂದು ನಾನು ನನ್ನ ಸಹೋದರರನ್ನು ಕೇಳಿರುವುದಿಲ್ಲ . ನನ್ನ ತಂದೆ ನನಗೆ ಆಸ್ತಿಯನ್ನು ಬರವಣಿಗೆ ರೂಪದಲ್ಲಿ ನೀಡಿರುತ್ತಾರೆ . ಸದರಿ ಬರವಣಿಗೆ ಯಾವ ದಿನಾಂಕಕ್ಕೆ ಆಯಿತು ಎಂದು ನನಗೆ ನೆನಪಿಲ್ಲ. ಆದರೆ **2001-02** ರಲ್ಲಿ ಆಗಿರಬಹುದು . ನನಗೆ ಆಸ್ತಿ ನೀಡುವ ಸಮಯದಲ್ಲಿ ಸಹೋದರರಿಗೂ ಆಸ್ತಿ ನೀಡಿರುತ್ತಾರೆ . ಒಟ್ಟು ನನ್ನ ತಂದೆಯ ಬಳಿ ಎಷ್ಟು ಆಸ್ತಿ ಇತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ತಂದೆ ನನ್ನ ಸಹೋದರರಿಗೆ ಎಷ್ಟು ಆಸ್ತಿ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ತಂದೆ ನೀಡುವ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿಲ್ಲ. ನಾನು ಕೂಡುಮಂಗಳೂರಲ್ಲಿ ವಾಸವಿರುವುದರಿಂದ ಸದರಿ ಆಸ್ತಿಯನ್ನು ನಾನು ನನ್ನ ತಮ್ಮನಾದ ತಮ್ಮೇಗೌಡನಿಗೆ ಮಾರಾಟ ಮಾಡಿರುತ್ತೇನೆ . ಆದರೆ ದಿನಾಂಕ ನನಗೆ ನೆನಪಿಲ್ಲ. ಸದರಿ ಆಸ್ತಿಯನ್ನು ನಾನು ನನ್ನ ತಮ್ಮನಿಗೆ ಅಂದಾಜು ರೂ **30,000/-** ಗಳಿಗೆ ಮಾರಾಟ ಮಾಡಿರುತ್ತೇನೆ . ನನ್ನ ತಂದೆ ನನಗೆ ಆಸ್ತಿ ನೀಡಿದ

**2** ವರ್ಷಗಳ ಒಳಗೆ ನಾನು ಅದನ್ನು ಮಾರಾಟ ಮಾಡಿರುತ್ತೇನೆ . ನಾನು ನನ್ನ ವಕೀಲರಿಗೆ ನನ್ನ ತಂದೆಯಿುಂದ ಯಾವುದೆ ಆಸ್ತಿ ಬಂದಿಲ್ಲ ಹಾಗೂ ಅದನ್ನು ಮಾರಾಟ ಮಾಡಿಲ್ಲ ಎಂದು ತಿಳಿಸಿ ತಕರಾರಿನಲ್ಲಿ ತಿಳಿಸಿರುವುದಿಲ್ಲ. ನಾನು ನನ್ನ ತಕರಾರಿನಲ್ಲಿ ತಿಳಿಸಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇದೆ. ತಕಾರಾನ್ನು ತಯಾರಿಸಲು ವಕೀಲರಿಗೆ ನಾನೆ ಮಾಹಿತಿಯನ್ನು ನೀಡಿರುತ್ತೇನೆ . ನಾನು ನನ್ನ ಪ್ರತಿವಾದ ಪತ್ರದ ಕಂಡಿಕೆ **14** ರಲ್ಲಿ ತಿಳಿಸಿರುವ ವಿಚಾರಗಳನ್ನು ನಾನೆ ನನ್ನ ವಕೀಲರಿಗೆ ಹೇಳಿ ತಿಳಿಯಿಸಿ ಬರೆಯಿಸಿರುತ್ತೇನೆ .

ನಾನು ದಿಃ **18.01.1973** ರಲ್ಲಿ ಕೆ ಎಂ ಎಫ್ ನಲ್ಲಿ ಸಹಾಯಕನಾಗಿ ಕೆಲಸಕ್ಕೆ ಸೇರಿರುತ್ತೇನೆ . ನಾನು ಕೆಲಸಕ್ಕೆ ಸೇರಿದಾಗ ನನಗೆ ಮಾಸಿಕ ಅಂದಾಜು **2** ಸಾವಿರ ಸಂಬಳ ದೊರೆಯುತ್ತಿತ್ತು . ನಾನು **1973** ರಲ್ಲಿ **2** ಸಾವಿರ ಸಂಬಳ ಬರುತ್ತಿತ್ತು ಎಂದು ಯಾವುದೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜುರಪಡಿಸಿರುವುದಿಲ್ಲ. ಸದರಿ ದಾಖಲೆ ಈಗ ಲಭ್ಯವಿರುವುದಿಲ್ಲ. ನಾನು ಕೆಲಸಕ್ಕೆ ಸೇರಿದಾಗ ತಿಂಗಳಿಗೆ **1** ಸಾವಿರ ಹಣ ಮನೆ ಖರ್ಚಿಗೆ ಮಾಡುತ್ತಿದ್ದೆ . ಉಳಿಕೆ **1** ಸಾವಿರ ಹಣ ಉಳಿಯುತ್ತಿತ್ತು . ಉಳಿಕೆ **1** ಸಾವಿರ ಹಣವನ್ನು ನಾನು ನನ್ನ ಹೆಂಡತಿಯ ಬಳಿ ಕೊಡುತ್ತಿದ್ದೆ . ನಾನು **2004** ರಲ್ಲಿ ನಿವೃತ್ತಿ ಹೊಂದಿದ್ದು ಆ ಸಮಯಕ್ಕೆ ನಾನು ಮಾಸಿಕ ರೂ **14** ಸಾವಿರ ಸಂಬಳ ಪಡೆಯುತ್ತಿದ್ದೆ . ನಾನು ಸಹಾಯಕನಾಗಿ ಡೈರಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೆ . ನಾನು ಮೊದಲು ಕೂಡುಮಂಗಳೂರಿನಲ್ಲಿ ಕೆಲಸ ಮಾಡಿದ್ದೇನೆ . **2004** ರಲ್ಲಿ ಸಂಬಳ ನನ್ನ ಖಾತೆಗೆ ಜಮೆ ಆಗುತ್ತಿತ್ತು . ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಒದಗಿಸಬಲ್ಲೆ .

ನಾನು ಬ್ಯಾಂಕ್ ಖಾತೆಯನ್ನು **1980** ರಲ್ಲಿ ತೆರೆದಿದ್ದು ಮೊದಲು ಕರ್ಣಾನಕ ಬ್ಯಾಂಕ್ನಲ್ಲಿ ಖಾತೆ ಹೊಂದಿದ್ದು ನಂತರ ಕೆನರಾ ಬ್ಯಾಂಕನಲ್ಲಿ ಖಾತೆಯನ್ನು ತೆರೆಯಲಾಯಿತು. ನನಗೆ ಸಂಬಳವನ್ನು **2000** ಇಸ್ವಿಯ ನಂತರ ಖಾತೆ ಮೂಲಕ ನೀಡುತ್ತಿದ್ದು ಅದಕ್ಕಿಂತ ಮೊದಲು ಪುಸ್ತಕದಲ್ಲಿ ಸಹಿಯನ್ನು ಪಡೆದು ಸಹಿಯನ್ನು ಮಾಡುತ್ತಿದ್ದರು . ಸದರಿ ಪುಸ್ತಕವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಿಲ್ಲ. ನಾನು ಲಕ್ಕಿಕುಪ್ಪೆ ಗ್ರಾಮದಲ್ಲಿದ್ದ ಸ್ವತ್ತನ್ನು ಮಾರಾಟ ಮಾಡಿದ ಹಣವನ್ನು ನನ್ನ ತಂದೆಗಾಗಿ ಖರ್ಚು ಮಾಡಿರುತ್ತೇನೆ . ಸದರಿ ವಿಚಾರವನ್ನು ನಾನು ನನ್ನ ವಕೀಲರಿಗೆ ತಿಳಿಸಿ ತಕರಾರಿನಲ್ಲಿ ಬರೆಯಿಸಲು ಯಾವುದೆ ತೊಂದರೆ ಇರಲಿಲ್ಲ. ದಾವಾಸ್ವತ್ತನ್ನು ಪೈಕಿ **2** ನೇ ಸ್ವತ್ತನ್ನು ಲಕ್ಕಿಕುಪ್ಪೆ ಗ್ರಾಮದಲ್ಲಿ ಆಸ್ತಿಗಳನ್ನು ಮಾರಾಟ ಮಾಡಿ ಸದರಿ ಸ್ವತ್ತನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ದಿಃ **10.02.2003** ರಲ್ಲಿ ನನ್ನ ಬಳಿ ರೂ **1,75,000/-** ಹಣ ಇತ್ತು ಎಂದು ತೋರಿಸಲು ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಹಣ ನನ್ನ ಹೆಂಡತಿಯ ಕೆನರಾ ಬ್ಯಾಂಕ್ ಕೂಡಿಗೆ ಬ್ರಾಂಚ್ ಖಾತೆಯಲ್ಲಿದ್ದು ಅದನ್ನು ಡ್ರಾ ಮಾಡಿ ಆಸ್ತಿಯನ್ನು ಖರೀದಿಸಲಾಗಿದೆ ಎನ್ನುವರು . ಸದರಿ ಬ್ಯಾಂಕ್ ನ ಸದರಿ ದಿನಾಂಕಕ್ಕೆ ಸಂಬಂಧಿಸಿದ ಸ್ಟೇಟವೆಂಟನ್ನು ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇರಲಿಲ್ಲ. ನನ್ನ ವಿವಾಹ **1978** ರಲ್ಲಿ ಆಗಿರುತ್ತದೆ . ದಾವಾಸ್ವತ್ತಿನ ಐಟಂ ನಂ **1** ರಲ್ಲಿ ನಾನು ನನ್ನ ಹೆಂಡತಿಯ ಬಳಿ ಕೂಡಿಟ್ಟಿದ್ದ ಹಣದಲ್ಲಿ ಖರೀದಿಸಿರುತ್ತೇನೆ. **1975-76** ರಲ್ಲಿ ನಾನು ನನ್ನ ನನ್ನ ತಂದೆ ತಾಯಿ ಬಳಿ ವಾಸಳಿರಲಿಲ್ಲ ಎಂದುತೋಿಸಲು ಯಾವುದೆ ದಾಖಲೆಗಳನ್ನು ಇರುವುದಿಲ್ಲ. ನಾನು ಐಟಂ ನಂ **1** ನ್ನು ಸ್ವತ್ತನ್ನು ಪಡೆದಿರುವ ಕ್ರಯ ಪತ್ರದಲ್ಲಿ ಕೂಡುಮಂಗಳೂರು

ವಿಳಾಸವನ್ನು ತೋರಿಸಿದ್ದೇನೆ . ನಾನು ಒಮ್ಮೆಯೂ ಲಕ್ಕಿಕುಪ್ಪೆ ಗ್ರಾಮದಲ್ಲಿ ಮತ ಚಲಾಯಿಸಿರುವುದಿಲ್ಲ. ನನ್ನ ತಂದೆಯ ಕುಟುಂಬದ ಬಿ ಪಿ ಎಲ್ ಕಾರ್ಡನಲ್ಲಿ ನನ್ನ ಹೆಸರು ಎಲ್ಲಿಯವರೆಗೆ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಕೂಡುಮಂಗಳೂರಿನಲ್ಲಿ ಬಿ ಪಿ ಎಲ್ ಕಾರ್ಡ ಮಾಡಿಸಿರುವುದಿಲ್ಲ, ಆದರೆ ಚುನಾವಣೆ ಗುರುತಿನ ಚೀಟಿಯನ್ನು **1981** ರಲ್ಲಿ ಮಾಡಿಸಿದ್ದೇನೆ . ನನ್ನ ತಂದೆ ನನಗೆ ಆಸ್ತಿ ನೀಡಿದ ಬರವಣಿಗೆಯಲ್ಲಿ ನನ್ನ ವಿಳಾಸವನ್ನು ತೋರಿಸಿರುವುದಿಲ್ಲ. ಕೇವಲ ನನ್ನ ಹೆಸರನ್ನು ಮಾತ್ರ ತೋರಿಸಲಾಗಿದೆ .

**3** ನೇ ಪ್ರತಿವಾದಿ ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿದ್ದಾನೆ . ನನಗೆ **1** ಮಗ ಹಾಗು **2** ಹೆಣ್ಣು ಮಕ್ಕಳು . ನನ್ನ ಮಗ **3** ನೇ ಪ್ರತಿವಾದಿ ಮೊದಲಿನಿಂದಲೂ ಯಾವುದೆ ಉದ್ಯೋಗ ಮಾಡುತ್ತಿರಲಿಲ್ಲ. ನನ್ನ **2** ಹೆಣ್ಣು ಮಕ್ಕಳಿಗೂ ನಾನೆ ಮದುವೆ ಮಾಡಿಕೊಟ್ಟಿರುತ್ತೆನೆ . ನನ್ನ ಮಗನಿಗೆ ಉದ್ಯೋಗವಿಲ್ಲದೆ ಇರುವುದರಿಂದ ಅವನಿಗೆ ಯಾವುದೆ ಆದಾಯ ಇಲ್ಲ ಎಂದರೆ ಸರಿ . ನನ್ನ ಮಗ ವಾದಿಗಳ ತಾಯಿಯನ್ನು ಮದುವೆಯಾಗುವಾಗ ಯಾುವುದೆ ಕೆಲಸ ಮಾಡುತ್ತಿರಲಿಲ್ಲ. **3** ನೇ ಪ್ರತಿವಾದಿ ಮದುವೆ ಮಾಡಿಕೊಳ್ಳುವ ಸಮಯದಲ್ಲಿ ನನ್ನ ಸಂಪಾದನೆಯಲ್ಲಿ ನನ್ನ ಮಗ ನನ್ನ ಹೆಂಡತಿ ಹಾಗೂ ನನ್ನ ಹೆಣ್ಣು ಮಕ್ಕಳು ಜೀವನ ಮಾಡುತ್ತಿದ್ದರು . ನನ್ನ ಸಂಪಾದನೆಯನ್ನು ಹೊರತುಪಡಿಸಿ ನನ್ನ ಹೆಂಡತಿ ದಿನಸಿ ಅಂಗಡಿ ಹಾಗೂ ಫ್ಲೋರ್ ಮಿಲ್ ನ್ನು ನಡೆಸುತ್ತಿದ್ದು ಅದರಿಂದ ಸಂಪಾದನೆ ಬರುತ್ತಿತ್ತು. ನನ್ನ ಹೆಂಡತಿ ಹೆಸರಿನಲೀ ದಿನಸಿ ಅಂಗಡಿಯನ್ನು **1985** ರಲ್ಲಿ ಪ್ರಾರಂಬಿಸಿದ್ದು , ಫ್ಲೋರ್ ಮಿಲ್ ನ್ನು ಅಂದಾಜು **1986-87** ರಲ್ಲಿ ಪ್ರಾರಂಬಿಸಲಾಗಿದೆ . ದಿನಸಿ ಅಂಗಡಿಯನ್ನು ಪ್ರಾರಂಬಿಸಲು ನಾನು **30** ಸಾವಿರ ಬಂಡವಾಳ ಹಾಕಿರುತ್ತೇನೆ . ನಾನು ಅಂಗಡಿ ನಡೆಸಲು ಪರವಾನಗಿ

ಪಡೆದಿದ್ದ . ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇಲ್ಲ . ಆ ಸಮಯದಲ್ಲಿ ನಾನು ಸರಕಾರಕ್ಕೆ ಎಷ್ಟು ಶುಲ್ಕ ಪಾವತಿಸಿದ್ದೆ ಎಂದು ನನಗೆ ಹೇಳಲು ಬರುವುದಿಲ್ಲ. ದಿನಸಿ ಅಂಗಡಿಯಲ್ಲಿ **1** ದಿನಕ್ಕೆ ಎಷ್ಟು ಆದಾಯ ಇತ್ತು ಎಂದು ಲೆಕ್ಕ ಪತ್ರ ಇಟ್ಟಿರುವುದಿಲ್ಲ. ಫ್ಲೋರ್ ಮಿಲ್ ಸಂಬಂದಿಸಿದಂತೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ . ಫ್ಲೋರ್ ಮಿಲ್ ನ್ನು ನನ್ನ ಹೆಂಡತಿಯೆ ನೊಡುತಿಕೊಳ್ಳುತ್ತಿದ್ದರು . ಫ್ಲೋರ್ ಮಿಲ್‌ಗೆ ಅಂದಾಜು **1** ತಿಂಗಳಿಗೆ ಖರ್ಚು ಮತ್ತು ಆದಾಯ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಫ್ಲೋರ್ ಮಿಲ್ ಪ್ರಾರಂಬಿಸಲು ಕೆ ಇ ಬಿ ನಿಂದ ಅನುಮತಿ ಪಡೆದಿದ್ದೇನೆ . ನಾನು ದಾವಾ ಅನುಸೂಚಿ **9** ನೇ ಸ್ವತ್ತನ್ನು ನಾನು ಸ್ವಯಂ ನಿವೃತ್ತಿ ಹೊಂದಿದ ಹಣದಿಂದ ನನ್ನ ಪ್ರತಿವಾದ ಪತ್ರದ ಕಂಡಿಕೆ **17** ರಲ್ಲಿ ತಿಳಿಸಿರುವಂತೆ ಕ್ರಯಕ್ಕೆ ಪಡೆದಿರುತ್ತೇನೆ . ನಾನು **2004** ರಲ್ಲಿ ಸ್ವಯಂ ನಿವೃತ್ತಿ ಹೊಂದಿರುತ್ತೇನೆ . ನನಗೆ ನಿವೃತ್ತಿ ಸಮಯದಲ್ಲಿ ಒಟ್ಟಾರೆಯಾಗಿ **10-12** ಲಕ್ಷ ಹಣ ಬಂದಿತ್ತು . ಫಂಡ್ ನಿಂದ ಬಂದ ಹಣಕ್ಕೆ ನಾನು ಯಾುವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದನ್ನು ನ್ಯಾಯಾುಲಯಕ್ಕೆ ಹಾಜರುಪಡಿಸಲು ಯಾವುದೆ ತೊಂದರೆ ಇರಲಿಲ್ಲ. ಸ್ವಯಂ ನಿವೃತ್ತಿ ಹಣ **2004-05** ರಲ್ಲಿ ಬಂದಿರುತ್ತದೆ .

ನನ್ನ ಹಿರೇಮಗಳಿಗೆ **1995** ರಲ್ಲಿ ಹಾಗೂ ಕಿರುಮಗಳಿಗೆ **2005** ರಲ್ಲಿ ವಿವಾಹ ಮಾಡಿಕೊಟ್ಟಿರುತ್ತೇನೆ . ನಾನು ನನ್ನ ಹೆಣ್ಣು ಮಕ್ಕಳಿಗೆ ವರದಕ್ಷಿಣೆ ನೀಡಿರುವುದಿಲ್ಲ. ನನ್ನ **2** ನೇ ಮಗಳಿಗೆ ಅಂದಾಜು **1** ರಿಂದ **1.5** ಲಕ್ಷ ಹಣ ಮದುವೆಗೆ ಖರ್ಚು ಮಾಡಿದ್ದೇನೆ . ಸ್ವಯಂ ನಿವೃತ್ತಿ ಯಿುಂದ ಬರುವ

ಹಣದಿಂದ ಮುಂನದೆ ವ್ಯವಹಾರ ಮಾಡಿಕೊಂಡು ಹೋಗಬಹುದು ಎಂಬ ಕಾರಣಕ್ಕೆ ನಾನು ಸ್ವಯಂ ನಿವೃತ್ತಿ ಹೊಂದಿರುತ್ತೇನೆ . ನಾನು ನನಗೆ ಬರುತ್ತಿದ್ದ ಸಂಬಳ ಸಾಲದೆ ಇದ್ದ ಕಾರಣ ನಿವೃತ್ತಿ ಹಣದಿಂದ ಉದ್ಯೋಗ ಮಾಡಿ ಜೀವನ ಮಾಡಬೇಕೆಂಬ ಉದ್ದೇಶಕ್ಕೆ ಸ್ವಯಂ ನಿವೃತ್ತಿ ಪಡೆದಿದ್ದೇನೆ ಎಂದರೆ ಸರಿ .

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ